**ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ,**
**ಉಡುಪಿ ಜಿಲ್ಲೆ , ಉಡುಪಿ**

**ಸೆಷನ್ಸ್ ಕೇಸ್ ನಂಃ 27/2017 ಅ.ಸಾ.1**

**ಚಾ.ಸಾ.1**

| | | |
|---|---|---|
| ಸಾಕ್ಷಿದಾರರ ಹೆಸರು | - | ವಿದ್ಯಾಧರ ನಾಯಕ್ |
| ತಂದೆಯ ಹೆಸರು | - | ಅನಂತ ನಾಯಕ್ |
| ವಯಸ್ಸು | - | 42 ವರ್ಷ |
| ಉದ್ಯೋಗ | - | ಇಲೆಕ್ಟ್ರೀಷಿಯನ್ |
| ವಿಳಾಸ | - | ಸಣ್ಣಕ್ಕಿಬೆಟ್ಟು, ಹೆರ್ಗ ಗ್ರಾಮ, ಉಡುಪಿ |

ದಿನಾಂಕಃ 07-03-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ**

1. ಚಾಸಾ2 ನನ್ನ ತಾಯಿ. ಚಾಸಾ3 ನನ್ನ ಅಣ್ಣನ ಹೆಂಡತಿ. ಚಾಸಾ4 ನನ್ನ ಅತ್ತಿಗೆ. ಚಾಸಾ5 ಮತ್ತು 6 ನನ್ನ ಅಣ್ಣನ ಮಕ್ಕಳು. ನ್ಯಾಯಾಲಯದ ಮುಂದೆ ಇರುವ ಆರೋಪಿತರ ಪರಿಚಯ ಇರುವುದಿಲ್ಲ. ಆರೋಪಿತರು ನಮ್ಮನ್ನು ಬೆದರಿಸಿ ಅಪಹರಣ ಮಾಡಿ ನಮ್ಮ ಅತ್ತಿಗೆಯರ ಚಿನ್ನಾಭರಣ ದರೋಡೆ ಮಾಡಿರುವುದಿಲ್ಲ. ಈ ರೀತಿ ಪೋಲಿಸರಿಗೆ ದೂರು ನೀಡಿರುವುದಿಲ್ಲ. ಈಗ ತೋರಿಸಿದ ದೂರಿನಲ್ಲಿ ನನ್ನ ಸಹಿ ಇದೆ. ದೂರನ್ನು ನಿಪಿ 1 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ1(ಎ) ಎಂದು ಗುರುತಿಸಲಾಯಿತು. ನಿಪಿ1 ರಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ. ನನ್ನ ಸಮಕ್ಷಮದಲ್ಲಿ ಪೋಲಿಸರು ಘಟನಾ ಸ್ಥಳದಲ್ಲಿ ಮಹಜರು ಬರೆದಿಲ್ಲ ಮತ್ತು ಸೊತ್ತುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ. ಮಹಜರನ್ನು ನಿಪಿ.2 ಎಂದು ಸಾಕ್ಷಿಯ ಸಹಿಯನ್ನು ನಿಪಿ2(ಎ) ಎಂದು ಗುರುತಿಸಲಾಯಿತು. ಪೋಲಿಸರು ಸಮಕ್ಷಮ ಆರೋಪಿತರು ಕೃತ್ಯಕ್ಕೆ ಬಳಸಿದ ಸೊತ್ತುಗಳನ್ನು ಹಾಜರು ಪಡಿಸಿರುವುದಿಲ್ಲ. ಸೊತ್ತು ಸ್ವಾಧೀನತಾ ಮಹಜರಿನಲ್ಲಿ ನನ್ನ ಸಹಿ ಇದ್ದು ಅದನ್ನು ನಿಪಿ.3 ಎಂದು, ಸಾಕ್ಷಿಯ ಸಹಿಯನ್ನು ನಿಪಿ.3(ಎ) ಎಂದು ಗುರುತಿಸಲಾಯಿತು. ಪೋಲಿಸರು ನನ್ನ ಸಮಕ್ಷಮದಲ್ಲಿ ಆರೋಪಿತರು ಚಾಸಾ 3 ಮತ್ತು 4 ಇವರಿಂದ ಆಭರಣಗಳನ್ನು ದರೋಡೆ ಮಾಡಿದ

ಸ್ಥಳದಲ್ಲಿ ಮಹಜರು ಬರೆದಿರುವುದಿಲ್ಲ. ಈಗ ತೋರಿಸಿದ ಮಹಜರಿನಲ್ಲಿ ನನ್ನ ಸಹಿ ಇದೆ. ಮಹಜರನ್ನು ನಿಪಿ.4 ಎಂದು, ಸಾಕ್ಷಿಯ ಸಹಿಯನ್ನು ನಿಪಿ.4(ಎ) ಎಂದು ಗುರುತಿಸಲಾಯಿತು. ಈ ಪ್ರಕರಣದಲ್ಲಿ ಪೋಲಿಸರು ನನ್ನ ಹೇಳಿಕೆ ಮತ್ತು ಮರು ಹೇಳಿಕೆಗಳನ್ನು ಪಡೆದುಕೊಂಡಿರುವುದಿಲ್ಲ.

2. ಪೋಲಿಸರು ಒಮ್ಮೆ ನನ್ನನ್ನು ಹಿರಿಯಡ್ಕ ಕಾರಾಗೃಹಕ್ಕೆ ಕರೆಸಿದ್ದು ಆ ಸಮಯದಲ್ಲಿ ನನ್ನ ಸಹಿ ಪಡೆದುಕೊಂಡಿರುತ್ತಾರೆ. 2, 3 ಮತ್ತು 4 ನೇ ಆರೋಪಿತರ ಗುರುತಿನ ಕವಾಯತಿನ ನಡವಳಿಗಳನ್ನು ನಿಪಿ.5 ರಿಂದ 10 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ5(ಎ) ರಿಂದ ನಿಪಿ10(ಎ) ಎಂದು ಗುರುತಿಸಲಾಯಿತು. ನನ್ನ ಸಮಕ್ಷಮದಲ್ಲಿ ತಹಶೀಲ್ದಾರರು ಈ ಆರೋಪಿತರ ಗುರುತು ಹಚ್ಚುವ ಕವಾಯತನ್ನು ನಡೆಸಿರುವುದಿಲ್ಲ ಮತ್ತು ಆರೋಪಿತರನ್ನು ನಾನು ನೋಡಿ ಗುರುತಿಸಿರುವುದಿಲ್ಲ.

**( ಈ ಹಂತದಲ್ಲಿ ಅಭಿಯೋಜಕರ ವಿನಂತಿಯ ಮೇರೆಗೆ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿ ಸವಾಲು ಮಾಡಲು ಅಭಿಯೋಜಕರಿಗೆ ಅನುಮತಿ ನೀಡಲಾಯಿತು.)**

**<u>ಪಾಟಿ ಸವಾಲುಃ ಸರಕಾರಿ ಅಭಿಯೋಜಕರಿಂದಃ</u>**

1. ದಿನಾಂಕ 03-12-2016 ರಂದು ರಾತ್ರಿ 1-30 ಗಂಟೆಗೆ 1 ರಿಂದ 5 ನೇ ಆರೋಪಿತರು ಕೃತ್ಯ ನಡೆಸುವ ಉದ್ದೇಶದಿಂದ 1 ನೇ ಆರೋಪಿಯ ಡಮ್ಮಿ ಪಿಸ್ತೂಲು ಹಾಗೂ ಏರ್ ಗನ್ ಹಿಡಿದುಕೊಂಡು ಮತ್ತು ಕಬ್ಬಿಣದ ಪಿಕ್ಕಾಸಿಯನ್ನು ತೆಗೆದುಕೊಂಡು ಕಾರು ನಂ-ಕೆಎ 19 ಎಂಬಿ 1616, ಕೆಎ 20 ಜಡ್ 7586 ರಲ್ಲಿ ಹೆರ್ಗಾ ಗ್ರಾಮದ ಸಣ್ಣಕ್ಕಿಬೆಟ್ಟು ಎಂಬಲ್ಲಿರುವ ನಮ್ಮ ಮನೆಗೆ ಅಕ್ರಮ ಪ್ರವೇಶ ಮಾಡಿ ಒಂದನೇ ಆರೋಪಿತನು ನನಗೆ ಚಾಸಾ2 ನನ್ನ ಅಮ್ಮನಿಗೆ, ಚಾಸಾ3 ಅತ್ತಿಗೆಗೆ ಏರ್ ಗನ್ ಹಿಡಿಯಿಂದ ಹಲ್ಲೆ ಮಾಡಿ ನನಗೆ ಬೆದರಿಸಿ ನಮ್ಮ ಮನೆಯಲ್ಲಿದ್ದ ಕಬ್ಬಿಣದ ಸಲಾಕೆ ಮತ್ತು ಪಿಕ್ಕಾಸಿನಿಂದ ನಮ್ಮ ಮನೆಯ ಎದುರು ಇರುವ ದೇವಿಯ ಗುಡಿಯ ಒಳಗೆಡೆಯ ಪೀಠವನ್ನು ಅಗೆಸಿದ್ದು ಮನೆಯ ಒಳಗೆ ಇದ್ದ ಎರಡು ಗೋದ್ರೇಜ್ ಗಳನ್ನು ಜಖಂಗೊಳಿಸಿ ಒಂದನೇ ಆರೋಪಿತನು ಮರದ ದೊಣ್ಣೆಯಿಂದ ಕಿಟಕಿ ಬಾಗಿಲುಗಳನ್ನು ಜಖಂಗೊಳಿಸಿ ರೂ.2,00,000/- ದಷ್ಟು ನಷ್ಟ ಉಂಟು ಮಾಡಿ ಮನೆಯ ಒಳಗೆ ಗೋದ್ರೇಜ್ ನಲ್ಲಿದ್ದ ಜಾಗದ ದಾಖಲಾತಿ, ನಗದು ಹಣ ರೂ.9000/- ಮತ್ತು ಟಿವಿಯನ್ನು ದರೋಡೆ ಮಾಡಿ ಬಳಿಕ ನಮ್ಮನ್ನು ಇತರ ಆರೋಪಿಗಳ ಸಹಾಯದಿಂದ ಬಲಾತ್ಕಾರವಾಗಿ ಅಪಹರಿಸಿ ಉಡುಪಿ ತಾಲೂಕು ಪೆರ್ಣಂಕಿಲ ಗ್ರಾಮದ ಒರ್ವಾಡಿ ಎಂಬಲ್ಲಿ ಮನೆ ನಂ. 1-11 ರ ಹಾಲ್ ನಲ್ಲಿ ಒಂದನೇ ಆರೋಪಿಯ ಮನೆಯಲ್ಲಿ ಚಾಸಾ2 ರಿಂದ

6 ಇವರನ್ನು ಅಕ್ರಮ ದಿಗ್ ಬಂಧನದಲ್ಲಿ ಇಟ್ಟು ಆರೋಪಿ 6 ರಿಂದ 8 ನೇ ಯವರು ಚಾಸಾ2 ನೇ ಯವರ ಮಗ ನನ್ನ ಅಣ್ಣ ಸಂತೋಷನು ಕೊಡಬೇಕಾದ ಹಣವನ್ನು ಕೊಡಬೇಕು ಎಂದು 2 ರಿಂದ 8 ನೇ ಆರೋಪಿತರ ಸಮಕ್ಷಮ ಬೆದರಿಸಿ ಬಳಿಕ ಅಲ್ಲಿಂದ ಉಡುಪಿ ತಾಲೂಕು ಪೆರ್ಣಂಕಿಲ ಗ್ರಾಮದ ಮನೆ ನಂ. 4/12 ಪುಷ್ಪಾ ನಿಲಯಕ್ಕೆ ನನ್ನನ್ನು ಮತ್ತು ಚಾಸಾ2 ರಿಂದ 6 ರವರನ್ನು ಬಲಾತ್ಕಾರದಿಂದ ಕರೆದುಕೊಂಡು ಹೋಗಿ ಒಂದನೇ ಆರೋಪಿಯು 2 ರಿಂದ 7 ನೇ ಆರೋಪಿತರೊಂದಿಗೆ ಸೇರಿ ಅಕ್ರಮ ದಿಗ್ ಬಂಧನ ಮಾಡಿ ಚಾಸಾ 3 ರವರ ಕಿವಿಯಲ್ಲಿದ್ದ ಚಿನ್ನ ಒಂದು ಜೊತೆ ಬೆಂಡೋಲೆ, ಅದಕ್ಕೆ ಜೋಡಿಸಿದ ಸಣ್ಣ ಚಿನ್ನದ ಚೈನ್ ಒಂದು ಜೊತೆ, ರೋಲ್ಡ್ ಗೋಲ್ಸ್ ಜುಮುಕಿ ಒಂದು ಜೊತೆ. ಚಿನ್ನದ ಉಂಗುರ-1, ಬೆಳ್ಳಿ ಉಂಗುರ-1 ಮತ್ತು ಒಂದು ಜೊತೆ ಕಾಲು ಚೈನು ಇವುಗಳನ್ನು ಹಾಗೂ ಚಾಸಾ4 ರವರಲ್ಲಿದ್ದ ಎರಡು ಎಳೆಯ ಚಿನ್ನದ ಕರಿಮಣಿ ಸರ ಹಾಗೂ ಚಿನ್ನದ ರಿಂಗ್ ದರೋಡೆ ಮಾಡಿಕೊಂಡು ಹೋಗಿರುತ್ತಾರೆಂದು ನನಗೆ ಈಗ ಓದಿ ಹೇಳಿದಂತೆ ನಿಪಿ-1 ರಂತೆ ದೂರು ನೀಡಿದ್ದೇನೆ ಎಂದರೆ ಸರಿಯಲ್ಲ. ಮೇಲೆ ಹೇಳಿದಂತೆ ಪೂರಕವಾಗಿ ಮರು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯು ನಿರಾಕರಿಸಿದ ಹೇಳಿಕೆಯನ್ನು ನಿಪಿ.11 ಎಂದು ಗುರುತಿಸಲಾಯಿತು. ದಿನಾಂಕ 21-01-2017 ರಂದು ಪೋಲಿಸರು ಸ್ವಾದೀನಪಡಿಸಿಕೊಂಡ ಏರ್ ಗನ್ ಅನ್ನು ನೋಡಿ ಗುರುತಿಸಿ ನಿಪಿ.12 ರಂತೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ 29-01-2017 ರಂದು ಕೃತ್ಯಕ್ಕೆ ಉಪಯೋಗಿಸಿದ ಕಾರನ್ನು ನೋಡಿ ಗುರುತಿಸಿ ನಿಪಿ.13 ರಂತೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ 03-02-2017 ರಂದು ಆರೋಪಿಯು ಸುಲಿಗೆ ಮಾಡಿಕೊಂಡು ಹೋದ ಟಿವಿಯನ್ನು ನೋಡಿ ಗುರುತಿಸಿ ನಿಪಿ.14 ರಂತೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ 07-03-2017 ರಂದು ಕೃತ್ಯಕ್ಕೆ ಉಪಯೋಗಿಸಿದ ರಿವಾಲ್ವರ್ ಮತ್ತು ಕಾರನ್ನು ನೋಡಿ ಗುರುತಿಸಿ ನಿಪಿ.15 ರಂತೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

2. ದಿನಾಂಕ 05-01-2017 ರಂದು ಪೋಲಿಸರು ಹೆರ್ಗಾ ಗ್ರಾಮದ ಸಣ್ಣಕ್ಕಿಬೆಟ್ಟು ಎಂಬಲ್ಲಿರುವ ನಮ್ಮ ಮನೆಗೆ ಭೇಟಿ ಕೊಟ್ಟಿದ್ದು ಸದ್ರಿ ಸ್ಥಳವು ಘಟನಾ ಸ್ಥಳವಾಗಿದ್ದು ಅದನ್ನು ನಾನು ಪೋಲಿಸರಿಗೆ ತೋರಿಸಿಕೊಟ್ಟಿದ್ದು ಪೋಲಿಸರು ನಮ್ಮ ಸಮಕ್ಷಮ ಸ್ಥಳ ಪರಿಶೀಲಿಸಿ ಸ್ಥಳದಲ್ಲಿ ಬಿದ್ದಿದ್ದ ಎರಡು ಗ್ಲಾಸ್ ತುಂಡುಗಳನ್ನು ಅಮಾನತ್ತುಪಡಿಸಿಕೊಂಡು, ಸ್ಥಳದಲ್ಲಿದ್ದ ಜಖಂಗೊಂಡ ಕಪಾಟನ್ನು ಪೋಲಿಸರು ಪರಿಶೀಲಿಸಿ, ನಂತರ ಆರೋಪಿ ದೇವರಗುಡಿಯನ್ನು ಅಗೆದು ಹಾಕಿದ ಸ್ಥಳವನ್ನು

ಪರಿಶೀಲಿಸಿ ನಿಪಿ.4 ರಂತೆ ಮಹಜರು ಬರೆದು ಷದ್ರಿ ಸೊತ್ತುಗಳನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಅದೇ ದಿನ ಪೋಲಿಸರು ಇನ್ನೊಂದು ಘಟನಾ ಸ್ಥಳವಾದ ಪೆರ್ಣಂಕಿಲ ಗ್ರಾಮದ ಮನೆ ನಂ.4-12-ಜಿ ಪುಷ್ಪಾ ನಿಲಯಕ್ಕೆ ಭೇಟಿ ಕೊಟ್ಟಿದ್ದು ಸದ್ರಿ ಸ್ಥಳವು ಆಭರಣಗಳನ್ನು ಸುಲಿಗೆ ಮಾಡಿದ ಸ್ಥಳವಾಗಿದ್ದು ಅದನ್ನು ಪೋಲಿಸರಿಗೆ ನಾನು ತೋರಿಸಿಕೊಟ್ಟಿದ್ದು ಅದೇ ಸಮಯ ಪೋಲಿಸರು ಪರಿಶೀಲಿಸಿ ನಿಪಿ.2 ರಂತೆ ಮಹಜರು ಬರೆದಿರುತ್ತಾರೆ ಎಂದರೆ ಸರಿಯಲ್ಲ. ಅದೇ ಸಮಯ ಕಚ್ಚಾ ನಕಾಶೆ ತಯಾರಿಸಿರುತ್ತಾರೆ ಎಂದರೆ ಸರಿಯಲ್ಲ. ನಂತರ ದಿನಾಂಕ 25-01-2017 ರಂದು ನಾನು ಪೋಲಿಸ್ ಠಾಣೆಯಲ್ಲಿ ಆರೋಪಿತರು ಕೃತ್ಯಕ್ಕೆ ಉಪಯೋಗಿಸಿದ ಕಬ್ಬಿಣದ ಹಾರೆ, ಪಿಕ್ಕಾಸಿ, ಸಲಾಕೆ ಯನ್ನು ಪಂಚರ ಸಮಕ್ಷಮದಲ್ಲಿ ಅಮಾನತ್ತುಪಡಿಸಿಕೊಂಡು ನಿಪಿ.3 ರಂತೆ ಮಹಜರು ಬರೆದಾಗ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ದಿನಾಂಕ 25-02-2017 ರಂದು ಬೆಳಿಗ್ಗೆ ಹಿರಿಯಡ್ಕ ಕಾರಾಗೃಹದಲ್ಲಿ ತಹಶೀಲ್ದಾರರು 2, 3 ಮತ್ತು 4 ನೇ ಆರೋಪಿತರ ಗುರುತು ಹಚ್ಚುವ ಕವಾಯತ್ ನ್ನು ನನ್ನ ಸಮಕ್ಷಮ ಜರುಗಿಸಿದ್ದು ಆಗ ನಾನು ಹಾಜರಿದ್ದು 2, 3 ಮತ್ತು 4 ನೇ ಆರೋಪಿತರನ್ನು ಗುರುತಿಸಿರುತ್ತೇನೆ ಎಂದರೆ ಸರಿಯಲ್ಲ. ಅದೇ ಸಮಯ ನಿಪಿ.5 ರಿಂದ 10 ರಂತೆ ಗುರುತಿನ ಕವಾಯತ್ ನಡೆಸಿದ್ದು ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರೊಂದಿಗೆ ರಾಜಿ ಮಾಡಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಆರೋಪಿತರ ಪರವಾಗಿ ಪಾಟೀ ಸವಾಲುಃ** ಇಲ್ಲ ಎಂದು ತಿಳಿಸಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

(ದಿನೇಶ್ ಹೆಗ್ಡೆ)
ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ.